ಶ್ರೀ ಹಾರನಹಳ್ಳಿ ರಾವಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇದೊಂದು ಮಾನವೀಯ ಪ್ರಶ್ನೆಯಾಗಿದ್ದು, ಆ ದೃಷ್ಟಿಯಿಟ್ಟುಕೊಂಡು ತೊಂದರೆಯನ್ನು ಬಗೆಹರಿಸಬೇಕಾಗಿದೆ. ಈ ವಿಷಯದಲ್ಲಿ ರಾಜಕೀಯ ಏನೂ ಇಲ್ಲ. ಮಾನ್ಯ ಕಂದಾಯ ಮಂತ್ರಿಗಳು ಮಾನ್ಯ ಸದಸ್ಯರನ್ನು ಕರೆಯಿಸಿ ಅದರ ಬಗ್ಗೆ ಮಾತನಾಡಿ ಏನು ಮಾಡಬೇಕೆಂಬುದರ ಯೋಜನೆ ಮಾಡುತ್ತಾರೆಂದು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಎಸ್. ರಮೇಶ್ : ಈ ಮಳೆ ಬರುವ ಕಾಲವಲ್ಲ, ನಿನ್ನೆ ತಾನೇ 4 ಜನರನ್ನು ಆಸ್ಪತ್ರೆಗೆ ಸೇರಿಸಿದ್ದೇವೆ. ಅವರಿಗೆ ತಾತ್ಕಾಲಿಕವಾಗಿ ಈಗ ಇರಲು ವ್ಯವಸ್ಥೆ ಮಾಡಿಕೊಡಿ. ನಾವು ಸಭೆ ಮಾಡೋಣ. ಚರ್ಚೆ ಮಾಡೋಣ. ಅದರ ಬಗ್ಗೆ ತೀರ್ಮಾನ ತಗೆದುಕೊಳ್ಳೋಣ. ಅಲ್ಲಿ ಇರತಕ್ಕ ಗುಡಿಸಲುಗಳಲ್ಲಿ ಮೂರು ಲಕ್ಷ ಜನರು ವಾಸವಾಗಿದ್ದಾರೆ, ಇದು ಕೋರಮಂಗಲ, ರಾಜೇಂದ್ರನಗರ, ಲಕ್ಷ್ಮಣರಾವ್ ನಗರ, ಭಾಗದ ಸುತ್ತಮುತ್ತಲು ಬರುತ್ತದೆ. ಅವರನ್ನು ನೀವು ತೆಗೆಯಲು ಬರುವುದಿಲ್ಲ, ಅದರ ಬಗ್ಗೆ ನಾವು ಅನಂತರ ಕುಳಿತುಕೊಂಡು ಮಾತನಾಡೋಣ, ಅವರಿಗೆ ಏನಾದರೂ ಪರಿಹಾರವನ್ನು ಕೊಡಿ, ಅವರಿಗೆ ಹೆಂಚೋ ಅಥವಾ ಮರವನ್ನೋ ಕೊಡಿ. ಅವರು ತಾತ್ಕಾಲಿಕವಾಗಿ ಅಲ್ಲಿ ಇರಲಿ. ಅನಂತರ ನಾವು ಸಭೆಯನ್ನು ಮಾಡೋಣ, ಚರ್ಚೆಯನ್ನು ಮಾಡೋಣ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಮಾನ್ಯ ಕಂದಾಯ ಮಂತ್ರಿಗಳಿಗೆ ತಿಳಿಸುತ್ತೇನೆ.

<u>ನಿಯಮ 334 ರ ಮೇರೆಗೆ ಚರ್ಚೆ.</u>

<u>ವಿಷಯ : ಪ್ರತಿ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸುವುದು.</u>

ಶ್ರೀ ಯು.ಕೆ. ಶಾಮಣ್ಣ : ಸನ್ಮಾನ್ಯ ಅಧ್ಯಕ್ಷರೇ, ಯುವಜನ ಇಲಾಖೆಯಿಂದ ಪ್ರತಿ ತಾಲ್ಲೂಕಿನಲ್ಲಿ ಒಂದು ಆಟದ ಮೈದಾನ (ಪೆವಿಲಿಯನ್) ಮಾಡಿಸುವ ಯೋಜನೆ ಇದೆಯೇ? ಈಗ ರಾಜ್ಯದಲ್ಲಿ ಎಷ್ಟು ತಾಲ್ಲೂಕಿನಲ್ಲಿ ಕ್ರೀಡಾಂಗಣವಿದೆ? ಕ್ರೀಡಾಂಗಣ ಇಲ್ಲದೆ ಇರುವ ಕಡೆ ಯಾವಾಗ ಕೊಡುತ್ತೀರಿ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಯುವ ಜನ ಮತ್ತು ಕ್ರೀಡಾ ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ನಿಯಮ 334 ರ ಅಡಿಯಲ್ಲಿ ಮಾನ್ಯ ಸದಸ್ಯರಾದ ಶಾಮಣ್ಣನವರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ರೀಡಾಂಗಣವನ್ನು ನಿರ್ಮಾಣ ಮಾಡಿಕೊಡುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಸಚಿವರು ಪರಿಶೀಲಿಸುತ್ತಾರೆ.

2. ಬೆಳಗಾಂ ತಾಲ್ಲೂಕು ಕಾಡೊಳ್ಳಿಗೆ ಆರೋಗ್ಯ ಕೇಂದ್ರ.

SRI. K. G. MODAGEKAR DESAI : Large number of people are demanding the Primary Health Centre at Kadoli Village, Belgaum Taluk, because the people of Kadoli Village and surrounding Villages having to come to Belgaum City for treatment at odd hours. The population of Kadoli Village is about 10,000 and surrounding Villages population is more than